# ನವಿಲುಗನ್ನಡಿ

▶▶ ಸೆಪ್ಟೆಂಬರ್ ಸಂಚಿಕೆಯ ‘ಮಯೂರ’ ತುಂಬಾ ಚೆನ್ನಾಗಿ ಮೂಡಿಬಂದಿದೆ. ಜಗನ್ನಾಥ ಪ್ರಕಾಶ್ ಅವರ ಲೇಖನ ‘ಕಪ್ಪು ವರ್ಣೀಯನೊಬ್ಬನ ಓಟ–ಹೋರಾಟ’ ಸೊಗಸಾಗಿತ್ತು; ಓದಿಸಿಕೊಳ್ಳುವಂತಿತ್ತು. ಓಟಗಾರ ಜೆಸ್ಸಿ ಓವನ್ಸ್‌ರ ಹೋರಾಟದ ಕತೆ ಅಚ್ಚರಿ ಹುಟ್ಟಿಸುವಂತಿದೆ.

**ಪ್ರೀತಿ ಭಟ್, ಉಜಿರೆ**

▶▶ ರವಿರಾಜ ಬೈಕಂಪಾಡಿಯವರ ಪತ್ತೇದಾರಿ ಕತೆ ‘ಒಡೆದ ಹೂದಾನಿ’ಯಲ್ಲಿ ಪಾತ್ರಗಳ ಚಿತ್ರಣ, ಕತೆಯ ನಿರೂಪಣೆ ನೈಜವಾಗಿದೆ. ಜತೆಗೆ ಕತೆ ಕುತೂಹಲ ಹುಟ್ಟಿಸಿತು.

**ಕೋದಂಡಕುಮಾರ್, ಮುಂಡಗೋಡ**

▶▶ ‘ಉರಿಯ ತಬ್ಬಿ ನೆರೆಯುತ್ತಾ...’(ಉಷಾ ನರಸಿಂಹನ್) ಮತ್ತು ‘ಸ್ವಾತಂತ್ರ್ಯ ಸೇನಾನಿ’(ಮೂಲ: ಉಷಾ ರಾಜಗೋಪಾಲನ್, ಕನ್ನಡಕ್ಕೆ: ಸಹನಾ ಹೆಗಡೆ) ಕತೆಗಳು ಮನಸ್ಸಿನಲ್ಲಿ ಅಚ್ಚೊತ್ತಿದವು. ಕತೆಗಾರ ಎಂ. ವ್ಯಾಸ ಅವರ ಸಾಹಿತ್ಯದ ಕುರಿತು ಕಿ.ರಂ. ನಾಗರಾಜ ಅವರು ಆಡಿದ ಮಾತುಗಳನ್ನು ಬರಹದಲ್ಲಿ(ರುದ್ರಕಾಲದ ಲಯಗಳನ್ನು ಹಿಡಿದ ಪ್ರತಿಭೆ) ವರದರಾಜ ಚಂದ್ರಗಿರಿ ಅವರು ಕಟ್ಟಿಕೊಟ್ಟ ಬಗೆ ಚೆನ್ನಾಗಿತ್ತು. ಈ ಲೇಖನ ವ್ಯಾಸ ಸಾಹಿತ್ಯದ ನೆನಪು ಮರುಕಳಿಸುವಂತೆ ಮಾಡಿದೆ.

**ಎಂ.ಎಸ್. ರಮೇಶ್, ಪುತ್ತೂರು**

▶▶ ‘ಉರಿಯ ತಬ್ಬಿ ನೆರೆಯುತ್ತಾ...’ (ಉಷಾ ನರಸಿಂಹನ್) ಹಾಗೂ ‘ಅಲ್ಲಿ, ಚಂದ್ರ ಮಂಡಲ ದಾಟಿಕೊಂಡು’ (ಬನವಾಸಿ ವೆಂಕಟೇಶ ದೀಕ್ಷಿತ್) ಕತೆಗಳು ವಾಸ್ತವಕ್ಕೆ ಹತ್ತಿರವಾದ ಕತೆಗಳಾಗಿವೆ.

**ಅರವಿಂದ ಯಾದವಾಡ, ಹುಬ್ಬಳ್ಳಿ**

▶▶ ಅನುವಾದಿತ ಕತೆ ‘ಸ್ವಾತಂತ್ರ್ಯ ಸೇನಾನಿ’




ಓದಿದೆ. ಓದಿದೆ ಎನ್ನುವುದಕ್ಕಿಂತ ಆ ಕತೆ ಓದಿಸಿಕೊಂಡು ಹೋಯಿತು ಎನ್ನುವುದೇ ಹೆಚ್ಚು ಸರಿ! ಕತೆ ಸಮಕಾಲೀನವಾಗಿದ್ದು ಯೋಚನೆಗೆ ಹಚ್ಚುವಂತಿದೆ.

**ನಾರಾಯಣ ಯಾಜಿ, ಶಿರಾಲಿ**

▶▶ ನೀಳ್ಗತೆ ‘ಅಲ್ಲಿ, ಚಂದ್ರ ಮಂಡಲ ದಾಟಿಕೊಂಡು’ ತುಂಬಾ ಚೆನ್ನಾಗಿ ಮೂಡಿಬಂದಿದೆ. ಕತೆ, ಸಿನಿಮಾ ನಟಿಯರ ಬದುಕಿನ ಕುರಿತ ಚಿಂತನೆಗೆ ಹಚ್ಚಿತು. ಸಿನಿಮಾದ ಮಾಯಾವಾಸ್ತವ ಬೇರೆಯೇ ಇರುತ್ತದೆ ಎಂಬುದನ್ನು ಕತೆ ತೋರಿಸಿದೆ.

**ನಂದಿನಿ ಗುಡಿಬಂಡೆ, ಕೋಲಾರ**

▶▶ ಹಿಂದೀ ಕತೆ ‘ಮುದಿ ಚಿಕ್ಕಮ್ಮ’ (ಮೂಲ: ಪ್ರೇಮ್‌ಚಂದ್, ಅನು: ಕೆ. ಶಾಂತಾಮಣಿ) ಹೃದಯಸ್ಪರ್ಶಿ. ಅದು ಮನುಷ್ಯನ ದುರಾಸೆಯ ಹಿಂದಿನ ಕ್ರೌರ್ಯವವನ್ನು ತೆರೆದಿಡುತ್ತದೆ. ಇದೇ ಕತೆ ಈ ಹಿಂದೆ ದೂರದರ್ಶನದಲ್ಲಿ ಗುಲ್ಜಾರ್‌ರ ನಿರ್ದೇಶನದಲ್ಲಿ ಮೂಡಿಬಂದಿತ್ತು.

**ಹೊಸಹಳ್ಳಿ ರಾಮು, ಬೆಂಗಳೂರು**

▶▶ ಲೇಖಕಿ ಮಹಾಶ್ವೇತಾದೇವಿ ಅವರ ಕುರಿತ ಲೇಖನ ‘ಅಂತಃಕರಣದ ಅಂತರ್ಜಲ’ ಸಕಾಲಿಕ. ಅವರಿಂದ ಭಾರತೀಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ಸಂದಿದೆ.

**ಸುಮತಿ ಕೃಷ್ಣ, ತುಮಕೂರು**